
# ವಿಜಯಾ ಯೂನಿಯನ್ ಕಾರ್ಯಕರ್ತೆಯಾದದ್ದು



ರಚನೆ : ಅನುಬಿಸ್ವಾಸ್

ಅನುವಾದ : ಆರ್. ಪ್ರತಿಭಾ


Vijaya Union Karyakartheyagiddu
*by Anu Biswas Kannada Translation by Prathibha R.*
*Published by Garment & Textile Workers Union (GATWU)*
*No. 17/1, Hosaguddadahalli, Mysuru Road*
*Bengaluru - 560 026*

ಹಕ್ಕುಗಳು : GATWUಗೆ ಮಾಹಿತಿ ನೀಡಿ ಅಗತ್ಯವಿರುವವರು ಇದನ್ನು ಬಳಸಿಕೊಳ್ಳಬಹುದು
ಮತ್ತು ಮುದ್ರಿಸಿಕೊಳ್ಳಬಹುದು

**ಮೊದಲ ಮುದ್ರಣ : 2015**
**ಪ್ರತಿಗಳು : 1000**
**ಪುಟಗಳು : 14**
**ಖಾಸಗಿ ಪ್ರಸಾರಕ್ಕಾಗಿ**


ಪ್ರಕಾಶಕರು
GATWU
**ನಂ. 17/1, ಹೊಸಗುಡ್ಡದಹಳ್ಳಿ**
**ಮೈಸೂರು ರಸ್ತೆ,**
**ಬೆಂಗಳೂರು-560 026**
**ದೂರವಾಣಿ : 080-267454**


ಮುದ್ರಕರು
**ಇಳಾ ಮುದ್ರಣ**
ನಂ. 36, 40 ಅಡಿ ರಸ್ತೆ
ನ್ಯೂ ಟಿಂಬರ್‌ಯಾರ್ಡ್ ಲೇ ಔಟ್
ಬೆಂಗಳೂರು-560 026
ದೂರವಾಣಿ : 26757159



“ಏನ್ಮಾಡೋದು ಪಾರ್ವತಿ?
ಮೇ 1ರ ರ್‍ಯಾಲಿಗೆ ಭಾಗವಹಿಸೋದಕ್ಕೆ
ಸಾಕಷ್ಟು ಕಾರ್ಮಿಕರು ಮುಂದೆ ಬರ್ತಿಲ್ಲ’
‘ಪ್ರತೀ ಬಾರಿ ಕೆಲವೇ ಕೆಲವು ಮಹಿಳೆಯರು
ಮಾತ್ರ ಸ್ವಯಂಸೇವಕರಾಗಿರ್ತಾರೆ’
“ಗೌರಮ್ಮಾ ನಮ್ಮ ಯೂನಿಯನ್ ಯುವ ಕಾರ್ಮಿಕರನ್ನು
ತಲುಪಬೇಕು, ನಮ್ಮ ರ್‍ಯಾಲಿಗೆ ಕಾರ್ಮಿಕರು ಸ್ವಂತ ಇಷ್ಟದಿಂದ
ಬರೋ ಹಾಗೆ ಮಾಡೋದಕ್ಕೆ ಅದೊಂದೇ ದಾರಿ
ಇರೋದು ಅಂತ ನಂಗೆ ಅನ್ನಿಸ್ತಿದೆ!’
ಪ್ರತಿದಿನ ಬೇಕಾದಷ್ಟು ಮಂದಿ ಹೊಸ ಕಾರ್ಮಿಕರು
ಕಾರ್ಖಾನೆಗೆ ಸೇರುತ್ತಿರುತ್ತಾರೆ,
ಆದರೆ ಅವರಿಗೆ ಯೂನಿಯನ್ ಬಗ್ಗೆ ತಿಳಿದಿಲ್ಲ.
‘ಹ್ಞೂಂ ನೀನು ಹೇಳೋದು ಸರಿ ಅನ್ನಿಸ್ತಿದೆ’
DRAFT – Jan 5


"ಏ! ನಮ್ಮ ಬ್ಯಾಚ್‌ನಲ್ಲಿರೊ ಹೊಸ ಹುಡುಗಿ ಇಲ್ಲಿ ಇದ್ದಾಳೆ!'
ಹಲೋ! ನೀನು ಇಲ್ಲಿಗೆ ಹೊಸಬಳಾ?
ಹೌದು! ಒಂದು ತಿಂಗಳಾಯ್ತು ನಾನು ಬಂದು, ನನ್ನ ಹೆಸರು ವಿಜಯಾ
ನಿಂಗೆ ಈ ವಾತಾವರಣ ಇಷ್ಟ ಆಯ್ತಾ?
ಹ್ಹೂಂ, ಇಲ್ಲೀತನಕ ಒ.ಕೆ. ಕೆಲಸ ಸ್ವಲ್ಪ ಕಷ್ಟ, ಆದ್ರೆ ನಾನು ಹೆಚ್ಚಂದ್ರೆ ಒಂದೆರಡು ವರ್ಷ ಮಾತ್ರ ಇಲ್ಲಿ ಇರೋದೂ ಅಂತ ಅಂದ್ಕೊಂಡಿದೀನಿ
ಹ್ಹಾ...ಹ್ಹಾ... ಹ್ಹಾ....


ಏನಾಯ್ತು ಗೌರಮ್ಮಾ? ಅಷ್ಟು ನಗ್ತಾ ಇದ್ದೀರಾ?
ಈ ಹೊಸ ಹುಡುಗಿ ಹೇಳ್ತಿದಾಳೆ, ಅವಳು ಬರೀ ಎರಡು ವರ್ಷ ಮಾತ್ರ ಗಾರ್ಮೆಂಟ್ಸ್ ಕೆಲಸ ಮಾಡ್ತಾಳಂತೆ, ಆಮೇಲೆ ಬಿಟ್ಟು ಬಿಡ್ತಾಳಂತೆ'
ಕ್ಕಿ.... ಕ್ಕಿ.... ಕ್ಕಿ....
ಹ್ಹಾ.... ಹ್ಹಾ.... ಹ್ಹಾ.... ಹ್ಹಾ.... ಹ್ಹಾ....
ಯಾಕೆ ನನ್ನ ನೋಡಿ ಎಲ್ಲ ನಗ್ತಿದ್ದೀರಿ?
ನಮ್ಮನ್ನ ನೋಡು, ನಾವು ಯಾವಾಗ ಕೆಲಸಕ್ಕೆ ಸೇರಿದ್ದು ಅಂತ ಹೇಳ್ತೀಯಾ? ಎಷ್ಟು ವರ್ಷದಿಂದ ಇಲ್ಲಿ ಇದೀವಿ ಅಂತ ಹೇಳು?
ಏ ಲಕ್ಷ್ಮೀ, ನೀನು ಎಷ್ಟು ವರ್ಷದಿಂದ ಇಲ್ಲಿ ಕೆಲಸ ಮಾಡ್ತಾ ಇದ್ದೀಯ?
ನಾನಾ?
ಹ್ಞೂಂ, ಇರು ಲೆಕ್ಕ ಹಾಕ್ತೀನಿ..., ನಾನು ಸೇರಿದಾಗ ನನಗೆ 18 ವರ್ಷ.....! ಅಂದ್ರೆ ಸುಮಾರು 14 ವರ್ಷದಿಂದ!'


14 ವರ್ಷಗಳಾ? ಮತ್ತೆ ನೀವೆಲ್ಲಾ...?
11 ವರ್ಷ
14 ವರ್ಷ
9 ವರ್ಷ
ನೋಡು ನಾವೆಲ್ಲರೂ ಇಲ್ಲಿ ಸ್ವಲ್ಪ ದಿನ ಕೆಲಸ ಮಾಡೋಣ ಅಂತಾನೇ ಬಂದ್ವಿ, ಆದರೆ ನಮಗೆ ಹಣ ಬೇಕಲ್ಲ ಏನು ಮಾಡೋದು?"
ಹೌದಾ! ಹಾಗಾಗುತ್ತಾ? ನಂಗೆ ಯಾರೂ ಹೇಳ್ಲೇ ಇಲ್ಲ
ನೀನು ಕಲಿಯೋದು ಇನ್ನೂ ತುಂಬಾ ಇದೆ ಮಗುವೇ, ನಾಳೆ ಯಾಕೆ ನೀನು ಇದೇ ಜಾಗದಲ್ಲಿ ಬರಬಾರದು? ಬಂದ್ರೆ ನಾವಿಬ್ರೂ ಸೇರಿ ಮಾತಾಡಬಹುದು!"
ಖಂಡಿತಾ



ಮರುದಿನ. . . . .
ಹ್ಞೂಂ.... ಇನ್ನೂ ಅವಳು ಬಂದಿಲ್ಲ, ನನಗೆ ಅನ್ನಿಸುತ್ತೆ ಅವಳು ಬರೋದೇ ಇಲ್ಲ ಅಂತ......
ತಕ್ಷಣ...
ಗೌರಮ್ಮಾ! ರೀ ಗೌರಮ್ಮಾ!
ಕ್ಷಮಿಸಿ, ನಾನು ಬರೋದು ತಡ ಆಯ್ತು, ಓಟಿ ಮಾಡಿ ಬಂದೆ'
ಅದು ಹೇಗೆ
ಅದ್ರಲ್ಲೇನೂ ತಪ್ಪಿಲ್ಲ, ಓಟಿ ಮಾಡಿದ್ರೆ ಹೆಚ್ಚು ಹಣ ಸಿಗುತ್ತಲ್ಲ, ಅದ್ರ ಬಗ್ಗೆ ನಂದೇನೂ ತಕರಾರಿಲ್ಲ
'ನೀನು ಅದೃಷ್ಟವಂತೆ, ಯಾಕಂದ್ರೆ ಈಗ ಪರಿಸ್ಥಿತಿ ಸುಧಾರಿಸಿದೆ! ಮೊದಲು ನಮಗೆ ಯಾವಾಗಲೋ ಒಂದು ಸಾರಿ ಓಟಿ ಹಣ ಸಿಗ್ತಿತ್ತು! ಯಾಕಂದ್ರೆ, ಫ್ಯಾಕ್ಟ್ರೀಲಿ ಕೆಲಸ ಇಲ್ಲದೇ ಇರುವಾಗ ನಮ್ಮನ್ನ ಮನೇಗೆ ಕಳಿಸಿ ಬಿಡೋರು! ಎಷ್ಟು ಮುಂಚೆ ಮನೇಗೆ ಕಳಿಸ್ತಿದ್ರೋ ಅಷ್ಟು ಗಂಟೆ ನಮ್ಮ ಲೆಕ್ಕದಲ್ಲಿ ಬರ್ಕೊಳೋರು! ಕ್ರೆಡಿಟ್ ಅವರ್ಸ್..... ಆಮೇಲೆ ಈ ಕ್ರೆಡಿಟ್ ಅವರ್ ಮುಗಿಸೋಕೆ ನಾವು ಸಂಜೆ, ಭಾನುವಾರ ಎಲ್ಲ ಕೆಲಸ ಮಾಡ್ತಿದ್ವಿ, ಯಾವುದೇ ಹಣ ಇಲ್ಲದೇ! ಇದು ಅನ್ಯಾಯ ಅಂತ ಯೂನಿಯನ್ ನಮಗೆ ಮಾಹಿತಿ ನೀಡಿತು! ಈ ವಿಷಯಾನ ಅವರು ಬ್ರಾಂಡ್‌ಗಳೊಂದಿಗೆ ಮತ್ತು ಮ್ಯಾನೇಜ್‌ಮೆಂಟ್‌ವರೆಗೆ ತಗೊಂಡು ಹೋದ್ರು, ಆಮೇಲೇನೇ, ನಮಗೂ ಓಟಿ ಹಣ ಸರಿಯಾಗಿ ಸಿಗೋದಕ್ಕೆ ಶುರುವಾಯ್ತು ಈ ಕ್ರೆಡಿಟ್ ಅವರ್ಸ್ ಕಾಟ ತಪ್ತು'



ಓ ನೀನಾ? ಒಳ್ಳೇದಾಯ್ತು, ನಾನು ನಿಂಗೇ ಕಾಯ್ತಿದ್ದೆ, ನಮ್ಮ ಬ್ಯಾಚ್‌ಗೆ ಓಟ ಇರೋದ್ರಿಂದ ಬಸ್ಸು ಒಂದು ಗಂಟೆ ತಡವಾಗಿ ಹೊರಡುತ್ತೆ, ಅಲ್ಲೀವರೆಗೂ ನಾವು ಕಾಫಿ ಕುಡಿಯೋಣ್ವಾ?'
ಸರಿ ಹೋಗೋಣ
ಆದ್ರೆ ನೀವೂ ಓಟ ಮಾಡಬೇಕಾಗಿತ್ತಲ್ವಾ?
ಇಲ್ಲ ನಂಗೆ ತುಂಬಾ ಬೆನ್ನು ನೋವು. ಅದರಲ್ಲೂ ಮುಟ್ಟಿನ ದಿನದಲ್ಲಿ ತುಂಬಾ ಜಾಸ್ತಿ ಇರುತ್ತೆ, ಅದಕ್ಕೆ ಆ ಟೈಮ್‌ನಲ್ಲಿ ನಾನು ಓಟ ಮಾಡಲ್ಲ ಅಂತೀನಿ, ಆದ್ರೂ ನಾನು ದಿನದ ಕೆಲಸ ಮಾಡೋದಕ್ಕೇ 3 ಮಾತ್ರೆ ತಗೋಬೇಕು'
ತುಂಬಾ ಮಹಿಳೆಯರಿಗೆ ಬೆನ್ನು ನೋವು ಇರುತ್ತಾ?
'ಅದು ಹೇಗೆ ಅಂದ್ರೆ, 5–6 ವರ್ಷ ಕೆಲಸ ಮಾಡಿದೋರಿಗೆಲ್ಲಾ ಇರುತ್ತೆ ಅಂತ ಹೇಳಬಹುದು, ಆದರೆ ಈ ಚಿಕ್ಕಮ್ಮನ್ನ ನೋಡು, ಅವಳು ನಂಗಿಂತಾ ಚಿಕ್ಕೋಳು, ಆದರೆ ಪ್ರತಿ ತಿಂಗಳೂ ಅವಳಿಗೆ ಕೆಮ್ಮು ಜ್ವರ ಬರುತ್ತೆ, ಅದಕ್ಕೆ ಇಂಜೆಕ್ಷನ್ ತಗೋಬೇಕೂಂದ್ರೆ ವಿನಾಯಕ ಕ್ಲಿನಿಕ್ ನಲ್ಲಿ 200 ರೂ. ಕೊಡಬೇಕು, ಈಗ ಡಾಕ್ಟರ್ ಹೇಳ್ತಾರಂತೆ, ಅವಳಿಗೆ ಇನ್ನೂ ಸ್ಟ್ರಾಂಗ್ ಇಂಜೆಕ್ಷನ್ ಕೊಡಬೇಕಾಗಿದೆಯಂತೆ, ಅದಕ್ಕೆ ರೂ. 300 ಆಗುತ್ತಂತೆ!'
ಡಾಕ್ಟರ್ ಏನು ಹೇಳ್ತಾರೆ ಈ ತೊಂದರೆಗೆ?
ನಾವು ಡಾಕ್ಟರ್‌ನ ಏನೂ ಕೇಳೋ ಹಾಗಿಲ್ಲ, ಅವರು ಇಂಜೆಕ್ಷನ್ ಕೊಡ್ತಾರೆ, ನಾವು ದುಡ್ಡು ಕೊಡ್ಬೇಕು ಅಷ್ಟೆ!'



ಅವಳು ಇಎಸ್‌ಐಗೆ ಹೋಗಿ ಇಂಜಕ್ಷನ್ ತಗೋಳೋಕೆ ಆಗಲ್ವಾ?
ನಾನೂ ಅವಳು ಇಎಸ್‌ಐಗೆ ಹೋಗಬೇಕು ಅಂತ ಯೋಚನೆ ಮಾಡಿದೆ, ಆದರೆ ನಂಗೆ ಗೊತ್ತಿರೋ ಹಾಗೆ ಇಎಸ್‌ಐನಲ್ಲಿ ರಕ್ತ ಪರೀಕ್ಷೆ ಮಾಡಿಸಿ ಅಂತಾರೆ, ಮತ್ತೆ ಅವರು ಕೊಡೋ ಮಾತ್ರೆ 5 ದಿನ ಆದ್ಮೇಲೆ ಕೆಲಸ ಮಾಡುತ್ತೆ, ಹೀಗಾದಾಗ ನಾವು ಕೆಲಸ ಹೇಗೆ ಮಾಡೋದು?'
ಅಲ್ದೇ ಅವರು ಒಳ್ಳೇ ಆಹಾರ ತಿನ್ನಿ ಅಂತಾರೆ. ಮೊಟ್ಟೆ, ಮಾಂಸ, ಹಾಲು, ಹಣ್ಣು . . . ಅದಕ್ಕೆಲ್ಲ ದುಡ್ಡು ಎಲ್ಲಿಂದ ತರೋದು?
ನಮ್ಮ ಕೆಲಸದ ಜೊತೆ ಓಟಿ ಮಾಡೋದೂ ಸೇರಿ ನಮ್ಮ ಆರೋಗ್ಯ ಹಾಳಾಗ್ತಿದೆ, ಇಷ್ಟರಮೇಲೆ ನಾವು ಮನೇಲೂ ಕೆಲಸ ಮಾಡ್ಬೇಕು, ವಿನಾಯಕ ಕ್ಲಿನಿಕ್ಕೇ ನಮಗೆ ಗತಿ'
ನಮಗೆ ಬರೋ ಸಂಬಳ, ಜೊತೆಗೆ ಮಾಡಕ್ಕೊಂಡಷ್ಟು ಓಟಿ ಹಣ ಸಾಕಾಗಲ್ವಾ? ನಂಗೆ ನಾನು ಸಂಪಾದಿಸೋ ಹಣ ಬೇಕಾದಷ್ಟು ಅನ್ನಿಸುತ್ತೆ'
ನಿಂಗೆ ಮದುವೆ ಆಗೋವರೆಗೂ ತಿಳ್ಯಲ್ಲ ಮುನ್ನಿ, ನನ್ನ ಎರಡು ಮಕ್ಕಳೂ ಈ ವರ್ಷದಿಂದ ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗೆ ಹೋಗ್ತಿದ್ದಾರೆ, ಅಂದ್ರೆ ಒಬ್ಬೊಬ್ಬರ ಅಡ್ಮಿಷನ್‌ಗೆ ರೂ. 10,000
ಆಮೇಲೆ ತಿಂಗಳಿಗೆ ಒಬ್ಬರಿಗೆ ಫೀಸು ಮತ್ತು ಪುಸ್ತಕಕ್ಕೆ ರೂ.1000, ಆಮೇಲೆ ಯೂನಿಫಾರ್ಮ್. ಅಡ್ಮಿಷನ್ ಹಣ ಹೊಂದಿಸಬೇಕಾದ್ರೆ ನಾನು ಎರಡು ಚೀಟಿ ಹಾಕಬೇಕಾಯ್ತು, ಏನೋ ನನ್ನ ಅದೃಷ್ಟ ಅಂದ್ರೆ ಗಂಡ ಒಳ್ಳೆಯವರು, ಮನೆ ಖರ್ಚಿಗೆ ಅವರ ಹಣ ಎಲ್ಲ ಕೊಟ್ಟು ಬಿಡ್ತಾರೆ'


ಬೇರೆಯವರ ಗಂಡಂದಿರೂ ಹಾಗಿರಲ್ವಾ ಅಕ್ಕಾ?
ಅಷ್ಟೆ, ಚಿತ್ರಾನ ನೋಡು, 6 ವರ್ಷದ ಹಿಂದೆ ಅವಳು ಮೊದಲು ಕೆಲಸಕ್ಕೆ ಬಂದಾಗ ನಿನ್ನ ಹಾಗೇ ಇದ್ದಳು
ಚಿಕ್ಕ ವಯಸ್ಸು, ತುಂಬಿ ತುಳುಕುವ ಆತ್ಮ ವಿಶ್ವಾಸ, ಯಾವುದಕ್ಕೂ ಹೆದರಿಕೆ ಇರಲಿಲ್ಲ
ಈಗ ಅವಳಿಗೆ ಮೂರು ಹೆಣ್ಣು ಮಕ್ಕಳು, ಮತ್ತು ಅಪ್ರಯೋಜಕ ಗಂಡ. ಅವನು ಒಳ್ಳೇ ಗಾರೆ ಕೆಲಸಗಾರ, ಕಡಿಮೆ ಅಂದ್ರೆ ದಿನಕ್ಕೆ ರೂ. 800 ದುಡೀಬಹುದು, ಆದ್ರೆ ಕೆಟ್ಟ ಚಟ ಅಂಟ್ಕೊಂಡಿದೆ, ಜೊತೆಗೆ ಸರಿಯಾಗಿ ಕೆಲಸಕ್ಕೆ ಹೋಗಲ್ಲ, ವಾರಕ್ಕೆ ಮೂರು ದಿನ ಹೋಗ್ತಾನೆ ಅಷ್ಟೇ, ಆ ಹಣವೂ ಸಹ ಅವನ ಕುಡಿತಕ್ಕೇ ಸರಿಹೋಗುತ್ತೆ, ನೀನು ಗಂಡು ಮಗು ಹೆತ್ತು ಕೊಡು, ನಾನು ಕುಡಿಯೋದು ಬಿಟ್ಟು ಬಿಡ್ತೀನಿ ಅಂತಾನಂತೆ, ಏನೋ ಅಂಗಡೀಲಿ ಮಾರೋ ವಸ್ತು ತಗೊಂಡು ಬಾ ಅನ್ನೋ ಥರಾ!'
ಸರಿ ಹಾಗಾದ್ರೆ, ನಾನು ಹೊರಡ್ತೀನಿ, ನನ್ನ ಬಸ್ ಬಂತು, ಇವತ್ತಾದ್ರೂ ನಾನೇ ಮುಂಚೆ ಹತ್ತಿ ಸೀಟು ಹಿಡ್ಕೋತೀನಿ'
ಈ ಭಾನುವಾರ ನಿಮ್ಮನ್ನ ನೋಡ್ಬೋದಾ?'
ಸರೀ. . . ಈ ಭಾನುವಾರ ನಾವಿಬ್ರೂ ಯೂನಿಯನ್ ಆಫೀಸ್‌ಗೆ ಹೋಗೋಣ.., ಮತ್ತೆ ಹುಷಾರಾಗಿರು, ತುಂಬಾ ಓಟಿ ಮಾಡ್ಬೇಡಾ. . .'

DRAFT


GATWU
ಅದೋ... ಅದೇ ನಮ್ಮ ಯೂನಿಯನ್ ಆಫೀಸ್
ನಮಸ್ತೇ ಪಾರ್ವತಿ! ನೋಡಿ ನಮ್ಮ ಯೂನಿಯನ್‌ಗೆ ಒಬ್ಬ ಹೊಸ ಮೆಂಬರ್‌ನ ಕರ್‍ಕೊಂಡು ಬಂದಿದೀನಿ!
ನಮಸ್ತೇ! ಬನ್ನಿ ಬನ್ನಿ, ನಾನು ಪಾರ್ವತಿ ಅಂತ, ಯೂನಿಯನ್ ಅಧ್ಯಕ್ಷಳಾಗಿ ಕೆಲಸ ಮಾಡ್ತಿದೀನಿ, ನಿಮ್ಮ ಬಗ್ಗೆ ಸ್ವಲ್ಪ ಹೇಳ್ತೀರಾ?
ನಾನು ವಿಜಯಾ ಅಂತ, ನಂಗೀಗ 18 ವರ್ಷ, ನಾನು ಕೆಲಸ ಅಂತ ಮೊದಲು ಬಂದಿದ್ದು ಇಲ್ಲಿಗೇ. ಯೂನಿಯನ್ ಬಗ್ಗೆ ಮಾರ್ಚ್ 8 ಮತ್ತು ಮೇ ಡೇ ಬಗ್ಗೆ ಗೌರಮ್ಮ ತಿಳಿಸಿದ್ರು, ಅದರ ಬಗ್ಗೆ ಇನ್ನೂ ತಿಳ್ಕೋಬೇಕೂಂತ ಆಸಕ್ತಿಯಿಂದ ಬಂದಿದೀನಿ'
'ಓಹ್!! ತುಂಬಾ ಒಳ್ಳೇದು!! ನಿಮಗೆ ಗೊತ್ತಿದೆಯಾ? ಮಾರ್ಚ್ 8ಗೂ ಗಾರ್ಮೆಂಟ್ಸ್ ಕಾರ್ಮಿಕರಿಗೂ ಐತಿಹಾಸಿಕ ಸಂಬಂಧ ಇದೆ ಅಂತಾ? 100 ವರ್ಷದ ಹಿಂದೆ ನ್ಯೂಯಾರ್ಕ್‌ನ ಗಾರ್ಮೆಂಟ್ಸ್ ಕಾರ್ಮಿಕರು ಈಗ ನಾವಿರೋ ಪರಿಸ್ಥಿತಿಯಲ್ಲೇ ಕೆಲಸ ಮಾಡ್ತಾ ಇದ್ರು, 8 ಗಂಟೆ ಕೆಲಸದ ಅವಧಿ ಇರಬೇಕು ಮತ್ತು ಉತ್ತಮ ವೇತನ ಸಿಗಬೇಕು ಅಂತ ಹೋರಾಟ ಮಾಡಿದವರಲ್ಲಿ ಅವರೇ ಮೊದಲಿಗರು! ಅದಕ್ಕೇ ಈ ದಿನ ನಮಗೆ ಬಹಳ ಮುಖ್ಯ, ಅದರಲ್ಲೂ ಕಾರ್ಮಿಕ ಕಾನೂನುಗಳನ್ನೇ ತೆಗೆದುಹಾಕ್ತಾ ಇರೋ ಈ ದಿನದಲ್ಲಿ ಇದರ ಆಚರಣೆ ಇನ್ನೂ ಬಹಳ ಮುಖ್ಯವಾಗುತ್ತೆ, ಕಾರ್ಮಿಕ ದಿನಾಚರಣೇನೂ ಅಷ್ಟೇ, ಕಾರ್ಮಿಕರ ಹೋರಾಟದ ಮಹತ್ವವನ್ನು ತಿಳಿಸೋ ದಿನ. ಇಲ್ಲಿ ಅತ್ಯಂತ ಕಡಿಮೆ ವೇತನ ಸಿಗ್ತಾ ಇರೋದ್ರಿಂದ, ಕಾರ್ಮಿಕರು ಓಟ ಬೇಡ ಅಂತ ಹೇಳೋಕೆ ಆಗ್ತಾ ಇಲ್ಲ, ನಮ್ಮ ಯೂನಿಯನ್ ಸದಸ್ಯರೂ ಸಹ ಓಟ ಬೇಡ ಅಂತ ಹೇಳಲ್ಲ.,'


ಹೌದು., ಓಟಿ ನಮ್ಮನ್ನ ಕೊಲ್ಲುತ್ತೆ ಅಂತ ಗೊತ್ತಿದೆ., ಆದರೆ ಮಕ್ಕಳ ಅಡ್ಮಿಷನ್‌ಗಾಗಿ ಮಾಡಿದ ಸಾಲ ತೀರೋವರೆಗಾದ್ರೂ ನಾನು ಓಟಿ ಮಾಡ್ಲೇ ಬೇಕು'
'ಹೌದು, ಅದೇ ಸಮಸ್ಯೆ, ನಮಗೆಲ್ಲ ಗೊತ್ತು, ದಿನದ 8 ಗಂಟೆ ಕೆಲಸವೇ ಎಷ್ಟು ಕಷ್ಟ ಅಂತ? ಮ್ಯಾನೇಜ್‌ಮೆಂಟ್ ಇಟ್ಕೊಂಡಿರೋ ಗೂಂಡಾಗಳು ನಮಗೆ ಊಟಕ್ಕೆ ಹೋಗಕ್ಕೆ ಬಿಡದೆ, ಕಾಫಿ, ನೀರು ಕುಡಿಯಕ್ಕೆ ಬಿಡದೆ ಕೆಲಸ ಕೆಲಸ ಅಂತ ಸಾಯಿಸ್ತಾರೆ, ಇನ್ನು 8 ಗಂಟೆಗಿಂತ ಹೆಚ್ಚು ಕೆಲಸ ಮಾಡೋದು ಅಂದ್ರೆ; ಹೆಚ್ಚು ದುಡ್ಡು ಸಿಕ್ಕಿದ್ರೂ ಸಹ ಅದು ನಮ್ಮನ್ನ ಕೊಂದು ಹಾಕುತ್ತೆ.'
ನಾವು ಬೆಳಿಗ್ಗೆ ಬೇಗ ಎದ್ದು, ಮನೆ ಕೆಲಸ ಎಲ್ಲ ಮುಗಿಸಿ........
ಒಂದು ನಿಮಿಷ ಬಿಡುವಿಲ್ಲದಂತೆ ಫ್ಯಾಕ್ಟ್ರೀಲಿ ದುಡಿದು.....
ರಷ್ ಇರೋ ಬಸ್‌ನಲ್ಲಿ ನೇತಾಡ್ಕೊಂಡು ಮನೇಗೆ ಬಂದು....
ಮನೇಲಿ ಇನ್ನೂ ಏನಾದ್ರೂ ಸಂಪಾದಿಸೋ ಕೆಲಸ ಮಾಡಿ....


ನಮ್ಮ ಜೀವನ ನಡೆಸುವಷ್ಟು ವೇತನ ಸಿಗೋತನಕ ನಾವು 8 ಗಂಟೆಗಿಂತ ಹೆಚ್ಚು ಕಾಲ ದುಡಿಯೋದು ತಪ್ಪಲ್ಲ...
ಕೆಲವರು ಹೇಳ್ತಾರೆ... ಅದು ಎಂದಿಗೂ ಸಾಧ್ಯವಿಲ್ಲ! ಆದ್ರೆ ನಮ್ಮ ಯೂನಿಯನ್ ಮೂಲಕ ನಾವು ಮಾಡಿರೋ ಸಾಧನೆ ನೋಡಿ... ಕಳೆದ 5 ವರ್ಷದಲ್ಲಿ ಅಂದ್ರೆ 2009ರಿಂದ ಇಲ್ಲಿವರೆಗೂ 2 ಸಾರಿ ಕನಿಷ್ಠ ವೇತನ ಪರಿಷ್ಕರಣೆ ಆಗಿದೆ, ಅಂದ್ರೆ, ನಮ್ಮ ವೇತನ ಎರಡು ಪಟ್ಟು ಹೆಚ್ಚಾಗಿದೆ. GATWU ಇಲ್ಲದಿದ್ರೆ ಇದನ್ನ ಸಾಧಿಸೋಕೆ ಖಂಡಿತಾ ಸಾಧ್ಯವಾಗ್ತಾ ಇರ್ಲಿಲ್ಲ.. .
ತುಂಬಾ ಸಾಧನೆ ಆಗಿದೆ., ನಾನು ಯೂನಿಯನ್‌ಗೆ ಸಂತೋಷದಿಂದ ಸೇರ್ತಾ ಇದ್ದೀನಿ., ಯೂನಿಯನ್ ಫೀಸ್ ತಗೊಳ್ಳಿ, ನನ್ನ ಎಲ್ಲ ಗೆಳತಿಯರಿಗೂ ಮೇ ಡೇ ರ್‍ಯಾಲಿಗೆ ಬರೋದಕ್ಕೆ ಹೇಳ್ತೀನಿ. . '
ಮೇ 1 ರಂದು ಗೌರಮ್ಮ, ಪಾರ್ವತಿ, ವಿಜಯಾ ಮತ್ತು ಅವರ ನೂರಾರು ಗೆಳತಿಯರು ರ್‍ಯಾಲಿಯಲ್ಲಿ ನಡೆದು ತಮ್ಮ ಹಕ್ಕುಗಳಿಗಾಗಿ ಆಗ್ರಹಿಸಿದರು., ಮತ್ತೇನು? ವಿಜಯಾ ಈಗ ಯೂನಿಯನ್‌ನಲ್ಲಿ ಒಬ್ಬ ಸಕ್ರಿಯ ಕಾರ್ಯಕರ್ತೆ!!!
GATWU ZINDABAD

ಇಲ್ಲಿ ಉಲ್ಲೇಖಿಸಲಾದ ಪಾತ್ರಗಳು ಕಾಲ್ಪನಿಕ. ಗಾರ್ಮೆಂಟ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್ (GATWU) ಕಾರ್ಯಕರ್ತರೊಂದಿಗೆ ಚರ್ಚಿಸಿ ಇದನ್ನು ತಯಾರಿಸಲಾಗಿದೆ.

2006ರಲ್ಲಿ GATWU ಕಾರ್ಮಿಕ ಸಂಘವಾಗಿ ನೋಂದಣಿಯಾಗಿ ಬೆಂಗಳೂರು ಮತ್ತು ಕರ್ನಾಟಕದಲ್ಲಿನ ಗಾರ್ಮೆಂಟ್ಸ್ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುತ್ತಿದೆ. ಹೆಚ್ಚಿನ ಮಾಹಿತಿಗೆ ಯೂನಿಯನ್ ವೆಬ್‌ಸೈಟ್ ಅನ್ನು ಸಂಪರ್ಕಿಸಿ



ವಿಜಯಾ, 18 ವರ್ಷ,
ಗಾರ್ಮೆಂಟ್ ಕಾರ್ಖಾನೆಯಲ್ಲಿ ಹೆಲ್ಪರ್
ಕೆಲಸ ಮಾಡುತ್ತಾಳೆ
ಮತ್ತು ಇದೇ ಅವಳ ಮೊದಲ ಕೆಲಸ.

ಗೌರಮ್ಮ, 35 ವರ್ಷ, ಕುಶಲ ಟೈಲರ್,
ಯೂನಿಯನ್ ಕಾರ್ಯಕರ್ತೆ

ಪಾರ್ವತಿ, 42 ವರ್ಷ, ಯೂನಿಯನ್‌ನಲ್ಲಿ ಪೂರ್ಣ
ಸಮಯದ ಕಾರ್ಯಕರ್ತೆ ಮತ್ತು ಯೂನಿಯನ್‌ನ ಅಧ್ಯಕ್ಷರು.